ದಿನಾಂಕ: 14 ಏಪ್ರಿಲ್ 2014

# ಪ್ರಚಾರ ದಿನಚರಿ-14/04/2014

ಅರುಣ್ ಜೇಟ್ಲಿ
(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

ಕಾಂಗ್ರೆಸ್ ಹತಾಶೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕಾಂಗ್ರೆಸ್ ಆಂತರಿಕ ವಿಚಾರಗಳ ಕುರಿತು ಎರಡು ಪ್ರಮುಖ ರಾಷ್ಟ್ರೀಯ ಪತ್ರಿಕೆಗಳು ಲೇಖನ ಪ್ರಕಟಿಸಿವೆ. ಮೋದಿ ಅವರನ್ನು ಹತ್ತಿಕ್ಕುವಲ್ಲಿ ಹತಾಶರಾದ ಕಾಂಗ್ರೆಸ್ ಪಕ್ಷ, ಪ್ರಿಯಾಂಕ ಗಾಂಧಿ ಅವರನ್ನು ಮೋದಿ ಅವರ ಪ್ರತಿಸ್ಪರ್ಧಿಯಾಗಿ ವರಣಾಸಿಯಿಂದ ನಿಲ್ಲಿಸುವ ಆಲೋಚನೆ ಮಾಡಿತ್ತು ಎಂದು ಒಂದು ಪತ್ರಿಕೆ ವರದಿ ಮಾಡಿದೆ. ಮತ್ತೊಂದು ವರದಿಯ ಪ್ರಕಾರ, ಅಗತ್ಯ ಸ್ಥಾನಗಳನ್ನು ಗಳಿಸುವಲ್ಲ ವಿಫಲರಾದ ಕಾಂಗ್ರೆಸ್ ಮುಖ್ಯಮಂತ್ರಿಗಳನ್ನು ಬದಲಾಯಿಸಲಾಗುವುದು ಎಂದು ತಿಳಿದುಬಂದಿದೆ.

ಈ ಎರಡೂ ವರದಿಗಳು ನಿಜವಾದರೆ, ಕಾಂಗ್ರೆಸ್ ಪಕ್ಷ ನೈಜತೆಯಿಂದ ಎಷ್ಟು ದೂರ ಸರದಿದೆ ಎಂದು ತಿಳಿದುಬರುತ್ತದೆ. ಗಾಂಧಿ ಕುಟುಂಬವನ್ನು ಸುತ್ತುವರಿಯಲಾಗಿದೆ. 1977ರ ಸಾರ್ವತ್ರಿಕ ಚುನಾವಣೆಯಲ್ಲಿ ಇಂದಿರಾ ಗಾಂಧಿ ಹಾಗೂ ಸಂಜಯ್ ಗಾಂಧಿ ಎದುರಿಸಿದ ಸನ್ನಿವೇಶ ಮರುಕಳಿಸಿದೆ. ಆರ್ಥಿಕವಾದ ಜನಪ್ರಿಯ ಯೋಜನೆಗಳು ಕೆಲಸಕ್ಕೆ ಬಂದಿಲ್ಲ. ಕುಟುಂಬ ವರ್ಚಸ್ಸು ಮಾಸಿದೆ. ಒಂದು ಕುಟುಂಬದ ಸುತ್ತಲು ಇರುವ ಜನರಿಂದ ನಿರ್ಮಿತ ಪಕ್ಷವು ಕುಟುಂಬ ಸದಸ್ಯನೊಬ್ಬ ನೆಚ್ಚಿನ ನಾಯಕನಾಗುವಲ್ಲಿ ವಿಫಲನಾಗಿದ್ದಾನೆ ಎಂಬ ನಿರ್ಧಾರಕ್ಕೆ ಬಂದಂತಿದೆ. ಕಾಂಗ್ರೆಸ್ ಪಕ್ಷಕ್ಕೆ ಸ್ಥೂಲ ಸ್ವರೂಪ ನೀಡುವ ಅಗತ್ಯವಿದೆ. ಆಗ ಅದರ ಸಮಸ್ಯೆಗಳಿಗೆ ಸಮಾಧಾನ ಹುಡುಕಲು ಸಾಧ್ಯ. ಕುಟುಂಬದ ಒಬ್ಬ ಸದಸ್ಯ ವಿಫಲನಾದರೆ ಅವರಿಗೆ ಪರ್ಯಾಯವಾಗಿ ಆ ಕುಟುಂಬದ ಮತ್ತೊಬ್ಬ ಸದಸ್ಯರನ್ನು ಆಯ್ಕೆ ಮಾಡುವ ಪರಿಹಾರ ಸೂತ್ರವನ್ನು ಕಾಂಗ್ರೆಸ್ ಪಕ್ಷ ಅನುಸರಿಸುತ್ತಿದೆ. ಈ ಹಿಂದೆ ನಾನು ಬರೆದ ಲೇಖನದಲ್ಲಿ ಈ ಒಂದು ಸೂತ್ರವನ್ನು ತಕ್ಕಮಟ್ಟಕ್ಕೆ ಊಹಿಸಿದ್ದೆ. ವರಣಾಸಿಯಲ್ಲಿ ಕುಟುಂಬ ಮತ್ತೊಬ್ಬ ಸದಸ್ಯರನ್ನು ನಿಲ್ಲಿಸುವ ಕಸಿವಿಸಿಯ ನಿರ್ಧಾರವನ್ನು ಜಾರಿಗೆ ತರಬೇಕಿತ್ತು ಎಂಬುದು ನನ್ನ ಅಭಿಲಾಷೆ. ಆ ಕುಟುಂಬದ ಅನ್ಯ ಸದಸ್ಯರ ಕುರಿತು ಅಸ್ತಿತ್ವದಲ್ಲಿರುವ ಮಿಥ್ಯವೂ ಇದರಿಂದ ರುಜುವಾತಾಗಲಿದೆ.

ಸಮಸ್ಯೆಯಿರುವುದು ಕಾಂಗ್ರೆಸ್ ಮುಖ್ಯ ಮಂತ್ರಿಗಳದ್ದಲ್ಲ. ಕಾಂಗ್ರೆಸ್ ಸೋತರೆ, ಅದಕ್ಕೆ ಮುಖ್ಯ ಮಂತ್ರಿಗಳು ಕಾರಣರಾಗಲಾರರು. ಸರ್ಕಾರದ ಆಳ್ವಿಕೆಯ ಗುಣಮಟ್ಟ ಹಾಗೂ ರಾಹುಲ್ ಗಾಂಧಿ ಅವರ ನೀರಸ ವ್ಯಕ್ತಿತ್ವ ಇದಕ್ಕೆ ಮುಖ್ಯ ಕಾರಣವಾಗಲಿದೆ. ಸಮಸ್ಯೆ ಕುಟುಂಬದ ಒಳಗೆ ಇರಬೇಕಾದರೆ, ಕಾಂಗ್ರೆಸ್ ಪಕ್ಷವೇಕೆ ಹರಕೆಯ ಕುರಿಗಳತ್ತ ನೋಡುತ್ತಿದೆ?

## ಕ್ಯಾಪ್ಟನ್ ಅಮರಿಂದರ್ ಸಿಂಗ್ ನಾಗರಿಕ ಚುನಾವಣೆಯಲ್ಲಿ:

ಕ್ಯಾಪ್ಟನ್ ಸಾಹೇಬರು ರಾಜಕೀಯ ಸಮಾಲೋಚನೆಯ ಹಿರಿಮೆಯನ್ನು ತಗ್ಗಿಸುವ ಅಪ್ರತಿಮ ಸಾಮರ್ಥ್ಯವನ್ನು ಹೊಂದಿದ್ದಾರೆ. ಸಜ್ಜನಿಕೆಯ ಮಿತಿಯೊಳಗೆ ನಡೆಯುತ್ತಿರುವ ಚುನಾವಣೆಯಲ್ಲಿ, ಅವರು ನೀರಿನಿಂದ ಹೊರ ತೆಗೆದ ಮೀನಿನಂತಾಗಿದ್ದಾರೆ. ಈ ಚುನಾವಣೆಯನ್ನು ನಾಗರಿಕತೆ,

ಘನತೆ ಹಾಗೂ ವಿಚಾರವಂತಿಕೆಯ ಚೌಕಟ್ಟಿನಲ್ಲಿ ಎದುರಿಸಬೇಕೆಂದು ನಾನು ನನ್ನ ಎಲ್ಲಾ ಸ್ನೇಹಿತರು, ಸಮರ್ಥಕರು ಹಾಗೂ ಹಿತಚಿಂತಕರನ್ನು ಕೇಳಿಕೊಳ್ಳುತ್ತೇನೆ. ನರೇಂದ್ರ ಮೋದಿ ಅವರು ಮುಂದಿನ ಮುಖ್ಯಮಂತ್ರಿಯಾಗಬೇಕು ಎಂಬ ಹೆಬ್ಬಯಕೆ ಅಮೃತಸರದಲ್ಲಿ ಎದ್ದುಕಾಣುತ್ತಿದೆ. ನನ್ನ ಪ್ರತಿ ಹಾಗೂ ನನ್ನ ವಿಚಾರಗಳ ಪ್ರತಿ ಜನರಲ್ಲಿ ಸಕಾರಾತ್ಮಕ ಮನೋಭಾವವನ್ನು ಕಂಡಿದ್ದೇನೆ. ಆದ್ದರಿಂದ ನಾವು ಪ್ರಮುಖ ವಿಚಾರಗಳಿಂದ ವಿಮುಖರಾಗಬಾರದು.

ಕ್ಯಾಪ್ಟನ್ ನನ್ನನ್ನು ಹೊರಗನಿವ ಎಂದು ಕರೆದಿದ್ದಾರೆ. ಅವರಂತೆ ನಾನೂ ಕೂಡ ಶೇಕಡ ನೂರಕ್ಕೆ ನೂರು ಮಜಃ ರಕ್ತವನ್ನೇ ನನ್ನ ನರನಾಡಿಗಳಲ್ಲಿ ಹೊಂದಿದ್ದೇನೆ. ಇದು ನನ್ನ ಪೂರ್ವಜರ ನಗರವಾದ್ದರಿಂದ, ಇಲ್ಲಿಯೇ ವಾಸ್ತವ್ಯ ಹೂಡುತ್ತೇನೆ ಎಂದು ನಾನು ಮಾತು ಕೊಟ್ಟಿದ್ದೇನೆ. ಆ ಮಾತಿನಂತೆ ನಡೆದುಕೊಂಡಿದ್ದೇನೆ. ಆದರೆ ಕ್ಯಾಪ್ಟನ್ ವಿಚಾರದಲ್ಲಿ ಇದನ್ನು ಹೇಳಬಹುದೇ? ಅಮೃತಸರದ ಜನರು ಅವರ ದರ್ಶನಕ್ಕೆ ಪಾಟಿಯಾಲ ಅರಮನೆ ಹೊರಗೆ ಕಾಯಬೇಕೆ?

✲✲✲✲✲